International Journal of Kannada Research
www.kannadajournal.com

ISSN: 2454–5813
IJKR 2021; 7(4): 195-198
© 2021 IJKR
www.kannadajournal.com
Received: 28-08-2021
Accepted: 30-09-2021

**ಡಾ.ಎಸ್.ಶಶಿಕುಮಾರ**
ಕ್ಯೂರೇಟರ್ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ ಮೈಸೂರು-570006

**Corresponding Author:**
**ಡಾ.ಎಸ್.ಶಶಿಕುಮಾರ**
ಕ್ಯೂರೇಟರ್ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ ಮೈಸೂರು-570006

# ರಾಮನಾಥಪುರದ ರಾಮನಾಥ ದೇವಾಲಯದ ಒಂದು ಅವಲೋಕನ

**ಡಾ.ಎಸ್.ಶಶಿಕುಮಾರ**

ರಾಮನಾಥಪುರ ಗ್ರಾಮವು ಹಾಸನ ಜಿಲ್ಲೆಯ ಅರಕಲಗೂಡು ತಾಲೂಕಿನ ಹೋಬಳಿ ಕೇಂದ್ರವಾಗಿ ಕಾವೇರಿ ನದಿ ದಂಡೆಯ ಎಡಭಾಗದಲ್ಲಿದೆ. ಇಲ್ಲಿ ಕಲೆ ಮತ್ತು ವಾಸ್ತುಶಿಲ್ಪ ಹಾಗೂ ಪುರಾಣ ಹಿನ್ನಲೆ ಸಂಸ್ಕೃತಿಯ ನೆಲೆವೀಡಾದ ಈ ಗ್ರಾಮದಲ್ಲಿ ಹಲವಾರು ದೇವಾಲಯಗಳು ನಿರ್ಮಾಣಗೊಂಡು ಅನಾದಿ ಕಾಲದಿಂದಲೂ ಭಕ್ತರ ಅತ್ಯಂತ ಪವಿತ್ರ ತಾಣವಾಗಿದೆ. ಇಲ್ಲಿ ನಮಗೆ ಚಾರಿತ್ರಿಕ, ಜಾನಪದೀಯ ಹಾಗೂ ಪೌರಾಣಿಕ ಹಿನ್ನೆಲೆಯುಳ್ಳ ದಾಖಲೆಯಿದ್ದು, ಈ ಗ್ರಾಮದಲ್ಲಿ ಚತುರ್ಯುಗ ಮೂರ್ತಿ ಶ್ರೀ ರಾಮೇಶ್ವರ, ಲಕ್ಷ್ಮಣೇಶ್ವರ, ಅಗಸ್ತ್ಯೇಶ್ವರ, ಪ್ರಸನ್ನ ಸುಬ್ರಹ್ಮಣ್ಯಸ್ವಾಮಿ, ಪಟ್ಟಾಭಿರಾಮ, ಲಕ್ಷ್ಮಿನರಸಿಂಹ, ವ್ಯಾಸಾಂಜನೇಯ, ಕನ್ನಿಕಾ ಪರಮೇಶ್ವರಿ, ಸೀತೇಶ್ವರ, ಕೋಟೆವಾಳಮ್ಮ ಹಾಗೂ ಇತ್ತೀಚೆಗೆ ರಾಘವೇಂದ್ರ ಸ್ವಾಮಿ ಮಠದ ಕಟ್ಟಡ ಕಾರ್ಯವು ಸಹ ನಡೆಯುತ್ತಿದೆ.

ಐತಿಹಾಸಿಕ ಹಿನ್ನೆಲೆಯಲ್ಲಿ ಇಲ್ಲಿನ ಪ್ರಾಚೀನ ಶಾಸನಗಳಲ್ಲಿ ಹೊಯ್ಸಳರ ಕಾಲಘಟ್ಟದಿಂದ ಹಿಡಿದು ಚೆಂಗಾಳ್ವರು, ವಿಜಯನಗರದ ಅರಸರು, ಮೈಸೂರು ಒಡೆಯರ ಆಳ್ವಿಕೆಯ ಕಾಲದ ಉಲ್ಲೇಖಗಳಿವೆ. ಹಾಗೆಯೇ ಇಲ್ಲಿನ ದೇವಾಲಯಗಳು ಮತ್ತು ಬಿಡಿಶಿಲ್ಪಗಳನ್ನು ಗಮನಿಸಿದಾಗ ಹೊಯ್ಸಳರ ಮುಂಚಿತವಾದ ಶಿಲ್ಪಗಳು ಹಾಗೂ ಹೊಯ್ಸಳರ ಕಾಲದ ದೇವಾಲಯ, ಶಿಲ್ಪಗಳು, ವಿಜಯನಗರದ ಕಾಲದಲ್ಲಿ ದಾನದತ್ತಿಯೊಂದಿಗೆ ವಿಸ್ತೀರ್ಣಗೊಂಡ ಭಾಗಗಳು ಹಾಗೂ ಮೈಸೂರು ಅರಸರ ಕಾಲದಲ್ಲಿ ವಿಸ್ತರಣೆಗೊಂಡ ದೇವಾಲಯದ ಭಾಗಗಳು ಅಧ್ಯಯನದ ಮುಖ್ಯ ಆಕರಗಳಾಗಿ ದೊರೆಯುತ್ತವೆ.

ಗ್ರಾಮದ ಪುರಾಣ ಐತಿಹ್ಯವನ್ನು ನೋಡಿದಾಗ ಅಗಸ್ತ್ಯ ಋಷಿ ಪತ್ನಿಯು ನದಿಯಾಗಿ ಹರಿದಾಗ, ಅಗಸ್ತ್ಯ ಮುನಿಯ ವ್ಯಾಮೋಹದಿಂದ ಕಾವೇರಿ ನದಿಯ ದಂಡೆಯಲ್ಲಿ ಅವಳನ್ನು ಅರಸುತ್ತಾ ಹೋಗುವುದರ ಜೊತೆಗೆ ಅಲ್ಲಲ್ಲಿ ಶಿವಲಿಂಗಗಳನ್ನು ಪ್ರತಿಷ್ಠಾಪನೆ ಮಾಡುತ್ತಾ ಹೋದರು. ಅಂತಹ ಒಂದು ಲಿಂಗ ರಾಮನಾಥಪುರದಲ್ಲಿದ್ದು ಇದನ್ನು ಅಗಸ್ತ್ಯೇಶ್ವರರೆಂದು ಕರೆಯುತ್ತಾರೆ ಹಾಗೂ ಪುರಾಣ ಕಾಲದಲ್ಲಿ ಶ್ರೀರಾಮಚಂದ್ರನು ಇಲ್ಲಿಗೆ ಬಂದಿದ್ದರು ಹಾಗೂ ಇಂದ್ರಾದಿ ದೇವತೆಗಳು ಇಲ್ಲಿಯ ಸಂಪರ್ಕ ಹೊಂದಿದ್ದರು. ಹಾಗೂ ಕಲಿಯುಗದಲ್ಲಿ ಆದಿಶಂಕರಾಚಾರ್ಯರು ಸಂಚಾರ ಮಾಡುತ್ತಾ ಇಲ್ಲಿಗೆ ಬಂದು ರಾಮನಾಥೇಶ್ವರ ದೇವಾಲಯದಲ್ಲಿ ಇಂದ್ರಾಕ್ಷಮ್ಮ ಮತ್ತು ವಿಶಾಲಕ್ಷಮ್ಮ ದೇವರನ್ನು ಪೂಜಿಸಿದರು, ಜೊತೆಗೆ ದುಷ್ಟಶಕ್ತಿಯ ನಿವಾರಣೆಗಾಗಿ ಶ್ರೀಚಕ್ರವನ್ನು ಸ್ಥಾಪಿಸಿದರು. ನಂತರ ಮಧ್ವಾಚಾರ್ಯರು ಮತ್ತು ರಾಮಾನುಜಾಚಾರ್ಯರ ಸಹದರ್ಶನ ಮಾಡಿದ್ದು ನಂತರ ವ್ಯಾಸರಾಯರು ಸಹ ಇಲ್ಲಿಗೆ ಬಂದು ಆಂಜನೇಯ ಗುಡಿ ಸ್ಥಾಪಿಸಿದರು. ಗುರು ರಾಘವೇಂದ್ರರು (1595-1671) ಇಲ್ಲಿಗೆ ಬಂದು ಪ್ರಾಣದೇವರ ಪ್ರತಿಷ್ಠೆ ಮಾಡಿದ್ದರಂತೆ ಅದೂ ಈಗ ಆಕ್ರಮಣಕಾರರಿಂದ ನಾಶವಾಗಿದೆ ಎಂಬ ಪುರಾಣಗಳಿವೆ.

ಈ ರೀತಿಯ ಪ್ರಾಚೀನ ಪರಂಪರೆಯ ಈ ಗ್ರಾಮ ಇಂದಿಗೂ ಒಂದು ಉನ್ನತವಾದ ಧಾರ್ಮಿಕ ಕೇಂದ್ರಗಳಲ್ಲಿ ಒಂದು ಎಂದು ಹೇಳಬಹುದು. ಇಲ್ಲಿ ವರ್ಷವಿಡೀ ಒಂದಲ್ಲಾ ಒಂದು ದೇವಾಲಯದಲ್ಲಿ ಜಾತ್ರೆ ರಥೋತ್ಸವಗಳು ನಡೆಯುತ್ತಿರುತ್ತವೆ. ಪ್ರತಿಯೊಂದು ದೇವಾಲಯಗಳು ಮುಜರಾಯಿ ಇಲಾಖೆಗೆ ಒಳಪಟ್ಟಿದ್ದರೂ ಸಹ ತಮ್ಮದೇ ಆದ ಟ್ರಸ್ಟ್‌ಗಳ ಮೂಲಕ ಅಭಿವೃದ್ಧಿಯನ್ನು ಮಾಡುತ್ತಿವೆ. ಈ ರೀತಿಯಲ್ಲಿ ವೈಷ್ಣವ ದೇವಾಲಯಗಳು ಉನ್ನತವಾಗಿ ಪೂಜಾ ಕೈಂಕರ್ಯ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿದ್ದರೆ, ಶೈವ ದೇವಾಲಯಗಳಲ್ಲಿ ಪ್ರಮುಖ ಪುರಾಣ ಪ್ರಸಿದ್ಧ ಹಾಗೂ ಕಲೆ ಮತ್ತು ವಾಸ್ತುಶಿಲ್ಪ ಪ್ರತಿಬಿಂಬಿಸುವ ರಾಮನಾಥ ದೇವಾಲಯ ದುಃಸ್ಥಿತಿಯಲ್ಲಿದ್ದು ಹಾಗೂ ಮೂಲ ಸ್ವರೂಪ, ಪ್ರಾಕೃತಿಕ ನೆರೆಯ ಹಾವಳಿಯಿಂದ ನಶಿಸುತ್ತಿರುವುದನ್ನು ಕೇಂದ್ರೀಕರಿಸಿ, ಈ ಪ್ರಬಂಧವನ್ನು ಅದರ ವಿಶೇಷತೆಗಳನ್ನು ಚರ್ಚಿಸಿ ಹೊರತರುವುದಾಗಿದೆ.

**ರಾಮನಾಥೇಶ್ವರ ದೇವಾಲಯ**: ಈ ದೇವಾಲಯ ಕಾವೇರಿ ನದಿಯ ಎಡದಂಡೆಯ ಮೇಲೆ ಪೂರ್ವಾಭಿಮುಖವಾಗಿ ಹೊಯ್ಸಳರ ಕಾಲದ ಪ್ರಾರಂಭಿಕ ಲಕ್ಷಣಗಳೊಂದಿಗೆ ನಿರ್ಮಾಣಗೊಂಡಿದೆ. ಈ ದೇವಾಲಯ ಗರ್ಭಗೃಹ, ಸುಖನಾಸಿ, ತೆರೆದ ಸುಖನಾಸಿ, ನವರಂಗ, ಮುಖಮಂಟಪ, ತೆರೆದ ಮುಖಮಂಟಪ ಹಾಗೂ ಸುತ್ತಲೂ ಪ್ರಾಕಾರ ಗುಡಿ ಇವುಗಳಲ್ಲಿ 35 ಲಿಂಗ ಮತ್ತು ನಂದಿಗಳು, ವಿಶಾಲಕ್ಷಮ್ಮ ಮತ್ತು ಇಂದ್ರಾಕ್ಷಿ, ದೇವರಗುಡಿ, ಮಹಾದ್ವಾರ ಗೋಪುರಗಳನ್ನು ಒಳಗೊಂಡಿದ್ದು ಹಾಗೂ ವಹ್ನಿ ಪುಷ್ಕರಣಿ ಹಾಗೂ ದೇವಾಲಯ ಪ್ರಾಕಾರಕ್ಕೆ ಹೊಂದಿಕೊಂಡಂತೆ ನದಿಯನ್ನು ಸೇರಿಸಿ ರಕ್ಷಣೆಗಾಗಿ ನಿರ್ಮಿಸಿದಂತೆ ದೊಡ್ಡ ಗೋಡೆಯ ಮಂಟಪದಲ್ಲಿ ಅರ್ಧನಾರೀಶ್ವರ ಗುಡಿಗಳು ವಿಶೇಷವಾಗಿವೆ.

ಈ ದೇವಾಲಯಕ್ಕೆ ಸಂಬಂಧಿಸಿದಂತೆ ಒಟ್ಟು 34 ಶಾಸನಗಳು ಕಂಡುಬಂದಿವೆ. ಇವುಗಳಲ್ಲಿ ಕ್ರಿ.ಶ.1252ರ ಶಾಸನದಲ್ಲಿ ವೀರ ಸೋಮೇಶ್ವರ ಮತ್ತು ಬೋಪದೇವರಸರು ಚೆಂಗಾಳ್ವರ ವಂಶ ಶ್ರೀರಂಗಪಟ್ಟಣದ ಆಳ್ವಿಕೆ ಮಾಡುವಾಗ ಕಾವೇರಿ ತಡಿಯ ಮೇಲೆ ಶ್ರೀರಾಮ ಪ್ರತಿಷ್ಠೆಯಂ ಮಾಡಿಸಿ ಹಸನಾದ ಸಹಸ್ರ ಲಿಂಗ ಸಹಿತ ಶ್ರೀರಾಮನಾಥ ದೇವರ ಮತ್ತು ಅಲ್ಲಿನ ಸ್ಥಾನಪತಿಗಳಿಗೆ ದತ್ತಿಗಳನ್ನು ನೀಡಿದ ವಿವರವಿದೆ. ಕ್ರಿ.ಶ.1250ರ ಹಾಗೂ ಕ್ರಿ.ಶ.1275ರ ಮೂರನೇ ವೀರನರಸಿಂಹನ ಕಾಲದಲ್ಲಿನ ದಾನದತ್ತಿಗಳಗಳ ಬಗ್ಗೆ ವಿವರವಿದೆ. ಕ್ರಿ.ಶ.1297ರ ಮೂರನೇ ಬಲ್ಲಾಳನ ದಾನಶಾಸನ ಹಾಗೂ ಕ್ರಿ.ಶ.1383ರಲ್ಲಿ ವಿಜಯನಗರ ಅರಸ ಎರಡನೇ ಹರಿಹರನ ಕಾಲದ ಶಾಸನದಲ್ಲಿ ಹರಿಹರ ರಾಯರ ಮನೆಯ ಕರಿಯ ಮಾಯಣ್ಣ ಎಂಬ ಸೇವಕ ರಾಮನಾಥ ದೇವರಿಗೆ ಹಲವು ದಾನದತ್ತಿಗಳು ಹಾಗೂ ಗೋಪಿನಾಥ ದೇವರ ನಂದಾದೀವಿಗೆಗೆ ದಾನ ನೀಡಿದ ಬಗ್ಗೆ ವಿವರಣೆವಿದೆ. ಬಹುಮುಖ್ಯವಾಗಿ ಇಲ್ಲಿರುವ ಗೋಪಿನಾಥ ಎಂದರೇ ಈ ದೇವಾಲಯದ ಪ್ರಾಕಾರದ ಗುಡಿಯಲ್ಲಿ ಇರುವ ಗೋಪಾಲಕೃಷ್ಣ ವಿಗ್ರಹವಾಗಿದ್ದು ಇದು ಬೇರೆ ಪ್ರತ್ಯೇಕ ಗುಡಿಯಲ್ಲಿದ್ದು ನಂತರ ನಶಿಸಿದಾಗ ಇದನ್ನು ಇಲ್ಲಿ ತಂದಿಟ್ಟಿರಬಹುದಾಗಿದೆ. ಹಾಗೂ ಉಳಿದಂತಹ 26 ಶಾಸನಗಳು 18–19ನೇ ಶತಮಾನದಲ್ಲಿ ಮೈಸೂರು ಒಡೆಯರ ಕಾಲಘಟ್ಟದ್ದಾಗಿದ್ದು ಇದರ ಪ್ರಕಾರ ಈ ದೇವಾಲಯದ ಸುತ್ತಲೂ ಇರುವ ಪ್ರಾಕಾರ ಗುಡಿಗಳ ಲಿಂಗ ಮತ್ತು ನಂದಿಗಳನ್ನು ಪ್ರತಿಷ್ಠೆ ಮಾಡಿಸಿದುದರ ಹೆಸರು ಹಾಗೂ ಆ ಲಿಂಗಗಳಿಗೆ ನಾಮಾಂಕಿತವನ್ನು ಕೊಟ್ಟಿರುವುದು ಶಾಸನಗಳಲ್ಲಿವೆ. ಪ್ರಮುಖ ಪ್ರತಿಷ್ಠಾಪನೆಯಲ್ಲಿ ಹೆಚ್ಚಾಗಿ ರಾಜಶ್ರೀ ಕರಣೀಕರು ಲಿಂಗೆಂಣ್ಣೈಯ್ಯನವರು, ಮದ್ದಗಿರಿ ಶ್ರೀನಿವಾಸಯ್ಯ, ಚನ್ನರಾಯಪಟ್ಟಣದ ಅರಳು ಮಲ್ಲಯ್ಯ, ಆನೆಕೆರೆ ಕೃಷ್ಣದೇವ, ಪುಟ್ಟನಂಜರಾಜಯ್ಯ, ಚೆಲುವಯ್ಯ ಅರಸಿ, ರಾಜಶ್ರೀ ಅರಸಿ, ರಾಜಶ್ರೀ ದೊಡ್ಡನಂಜರಾಜಯ್ಯ ಅರಸಿ, ದಳವಾಯಿ ದೊಡ್ಡಯ್ಯನವರ ಪೌತ್ರರಾದ ಕಳುಲೆ ವೀರರಾಜೈಯ್ಯನವರ ಪುತ್ರಿ ನಂಜರಾಜಯ್ಯ ಮುಂತಾದವರು ಇವುಗಳನ್ನು ಪ್ರತಿಷ್ಠಾಪಿಸಿರುವುದರ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿಸಿವೆ.

ಒಟ್ಟಾರೆಯಾಗಿ 12ನೇ ಶತಮಾನದ ವೀರಸೋಮೇಶ್ವರನ ಕಾಲದಲ್ಲಿ ಗರ್ಭಗೃಹ ಮತ್ತು ಸುಖನಾಸಿ ಹಾಗೂ ರಾಮನಾಥದೇವರ ಉದ್ಭವಲಿಂಗ ಪ್ರತಿಷ್ಠೆಯಾಗಿದೆ. ನಂತರ ಹೊಯ್ಸಳರ ಕಾಲದಲ್ಲಿಯೇ ನವರಂಗವು ಸರಳವಾಗಿ ರಚಿತವಾಗಿವೆ. ಇದಾದ ನಂತರ ವಿಜಯನಗರದ ಕಾಲದಲ್ಲಿ ಮುಖಮಂಟಪ ಮತ್ತು ತೆರೆದ ಮುಖಮಂಟಪ ರಚನೆಯಾಗಿದ್ದು ಅಲ್ಲದೇ ಕೊನೆಯದಾಗಿ ಮೈಸೂರು ಒಡೆಯರ ಕಾಲದಲ್ಲಿ ಸುತ್ತಲ ಪ್ರಾಕಾರ ಹಾಗೂ ಮಹಾದ್ವಾರ, ಗೋಪುರ ರಚನೆಯಾಗಿವೆ.

**ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ**: ಈ ದೇವಾಲಯದಲ್ಲಿ ಗರ್ಭಗೃಹ ಪ್ರಧಾನ ದೇವರಾಗಿ ಶ್ರೀರಾಮನಾಥನು 1 ಅಡಿ ಎತ್ತರದ ಉದ್ಭವ ಲಿಂಗದ ರಚನೆಯಲ್ಲಿದ್ದಾನೆ. ಗರ್ಭಗುಡಿಯ ದ್ವಾರದ ಇಕ್ಕೆಲಗಳಲ್ಲಿ ಕಾಳ ಮತ್ತು ಮಹಾಕಾಳ ದ್ವಾರಪಾಲಕರು ಹಾಗೂ ಲಲಾಟದಲ್ಲಿ ನಾಟ್ಯಶಿವ/ತಾಂಡವೇಶ್ವರ ಬಿಂಬವಿದೆ. ಹಾಗೆಯೇ ಸುಕನಾಸಿಯ ಮೂಲೆಗಳಲ್ಲಿ ವರ್ಧಮಾನ ಮಾದರಿಯ ಅರೆಸ್ತಂಭಗಳನ್ನು ಹೊಂದಿದೆ. ಅಲ್ಲದೇ ಬಳ್ಳಿಸುರುಳಿಗಳು ಗುಬುಟುಗಳ ಅಲಂಕರಣವಿರುವ ಏಕತಲದ ನಾಭಿಶ್ಛಂದ ವಿತಾನವಿದ್ದು ಮುಚ್ಚಿದ ಫಲಕದ 9 ಅಂಕಣಗಳಿದ್ದು ಮಧ್ಯದಲ್ಲಿ ಶಿವನ ಉಬ್ಬುಶಿಲ್ಪ ಉಳಿದಂತೆ ಅರಳಿದ ಪುಷ್ಪದಳದ ರಚನೆಯಿದೆ ಹಾಗೂ ಚೌಕಾಕಾರದ ತಲಪಟ್ಟಿಕೆಯಲ್ಲಿ ಅಷ್ಟಾದಿಕ್ಪಾಲಕರ ಉಬ್ಬುಶಿಲ್ಪಗಳನ್ನು ಸಹ ಕಾಣಬಹುದಾಗಿದೆ. ಈ ವಿತಾನ ಸುಂದರ ಅಲಂಕಾರವಾಗಿದ್ದರೂ ಸಹ ಇಲ್ಲಿನ ಕಪ್ಪು ಮಸಿಯಿಂದ ಅದರ ಸೌಂದರ್ಯ ಹಾಳಾಗಿರುವುದನ್ನು ಕಾಣಬಹುದಾಗಿದೆ. ಸುಕನಾಸಿಯ ದ್ವಾರಬಂಧವು ಅಲಂಕಾರಿಕ ಕೆತ್ತನೆಯಿಂದ ಕೂಡಿದ್ದು ಪಾರ್ಶ್ವಗಳಲ್ಲಿ ಚತುರ್ಭುಜಧಾರಿಗಳಾದ ಕಾಳಮಹಾಕಾಳರು ಇವರ ಮೇಲೆ ಜಾಲಾಂಧ್ರ ಮತ್ತು ಸ್ತಂಭ ಶಾಖೆಯಿದೆ. ಲಲಾಟದಲ್ಲಿ ಉಮಾಮಹೇಶ್ವರ ರಚನೆಯಿದ್ದು ಇದರ ಪಾರ್ಶ್ವಗಳಲ್ಲಿ ಹೊಯ್ಸಳರ ಸಾಮಾನ್ಯವಾದ ಗುಬುಟುಗಳ ರಚನೆಯಿದೆ. ಇದರ ಮೇಲಿನ ಪಟ್ಟಿಕೆಯಲ್ಲಿನ ಮಧ್ಯದಲ್ಲಿ ಗಣಪತಿ ಹಾಗೂ ಎರಡೂ ಕಡೆ ವ್ಯಾಳಗಳ ರಚನೆಯಿದೆ. ನಂತರದ ತೆರೆದ ಸುಕನಾಸಿಯಲ್ಲಿ 2 ಅಡಿ ಎತ್ತರದ ಮತ್ತು 3 ಅಡಿ ಉದ್ದದ ಸುಂದರವಾದ ನಂದಿಯಿದೆ. ಒಳಭಾವಣಿಯಲ್ಲಿ ತ್ರಿತಲ ಮಾದರಿಯ ನಾಭಿಚ್ಛಂಧ ವಿತಾನವಿದೆ. ಅಲ್ಲದೇ ಎಡಭಾಗದಲ್ಲಿ ಶಿವಪಾರ್ವತಿ ಎನ್ನುವ ಖಾಲಿಯಿರುವ ಗುಡಿ ಹಾಗೂ ಬಲಭಾಗದಲ್ಲಿ ಹನುಮಂತೇಶ್ವರ ಲಿಂಗವಿದೆ. ಈ ಗುಡಿಗಳ ದ್ವಾರಪಾರ್ಶ್ವಗಳಲ್ಲಿ ಸರಳವಾಗಿರುವ ಶೈವ ದ್ವಾರಪಾಲಕರು ಹಾಗೂ ಲಲಾಟದಲ್ಲಿ ಪದ್ಮದಳಗಳಿವೆ. ಬಹುಶಃ ಈ ಸುಖನಾಸಿಯ ದ್ವಾರಪಾಲಕರ ಪಕ್ಕದ ಗುಡಿಯ ದ್ವಾರಪಾಲಕರ ಲಕ್ಷಣಗಳನ್ನು ಹೋಲಿಸಿದಾಗ ನಂತರದ ಕಾಲದಲ್ಲಿ ನಿರ್ಮಿಸಿರುವುದು ಗೋಚರಿಸುತ್ತದೆ. ಅಲ್ಲದೇ ಶಿವಪಾರ್ವತಿ ಗುಡಿಯ ಬಲಪಾರ್ಶ್ವದಲ್ಲಿ ಹತ್ತು ಸಾಲುಗಳುಳ್ಳ ಅಪ್ರಕಟಿತ ಶಾಸನವಿದ್ದು ಇದಕ್ಕೆ ಸುಣ್ಣವನ್ನು ಸಹ ಹಚ್ಚಲಾಗಿದೆ. ಅಕ್ಷರಗಳನ್ನು ಗಮನಿಸಿದಾಗ ಇದು 15–16ನೇ ಶತಮಾನದ ಶಾಸನವಾಗಿದ್ದು ಈ ಗುಡಿಗಳೂ ಸಹ ಆಗ ಸೇರ್ಪಡೆಯಾಗಿರಬಹುದಾಗಿದೆ.

**ನವರಂಗ**: ನವರಂಗವು ಸುಕನಾಸಿಯ ಮುಂದಿನ ಭಾಗದಲ್ಲಿನ ನಾಲ್ಕು ಸ್ತಂಭಗಳು ಹೊಯ್ಸಳರ ಕಾಲದಲ್ಲಿನ ಶ್ರೀಕಾರ ಸ್ತಂಭ ಅದರ ಮುಂದಿನ 2 ಸ್ತರದ ವರ್ಧಮಾನ ಮಾದರಿ ಸ್ತಂಭ ಹಾಗೂ ನಂತರ ಸರಳ ಶ್ರೀಕಾರ ಸ್ತಂಭ ನಂತರದ ಎರಡು ಚಿತ್ರಖಂಡ ಸ್ತಂಭಗಳಿವೆ. ಒಟ್ಟಾರೆ ಹತ್ತು ಸ್ತಂಭಗಳಿರುವ ವಿಸ್ತಾರವಾದ ನವರಂಗ ಮೊದಲು ಹೊಯ್ಸಳರು, ನಂತರ ವಿಜಯನಗರದ ಅರಸರ ಕಾಲದಲ್ಲಿ ಪುನರ್ ನಿರ್ಮಾಣವಾಗಿದ್ದು ದಕ್ಷಿಣಕ್ಕೆ ದ್ವಾರವನ್ನು ಉತ್ತರಕ್ಕೆ ಉತ್ಸವ ಮೂರ್ತಿಗಳ ಗುಡಿಯನ್ನು ಸಹ ಹೊಂದಿದೆ. ಅಲ್ಲದೇ ಮೊದಲ ನಾಲ್ಕು ಶ್ರೀಕಾರ ಸ್ತಂಭಗಳಲ್ಲಿ ಭಾವಣಿಯ 6 ನಾಭಿಚ್ಛಂದ ವಿತಾನಗಳ ವಿವಿಧ ರೀತಿಯಲ್ಲಿ ರಚನೆಗೊಂಡಿವೆ. ನವರಂಗದ ಬಲಭಾಗದ ಕೋಷ್ಠಗುಡಿಯಲ್ಲಿ ಸುಂದರವಾದ ಗಣಪತಿಯಿದ್ದು ಇದರ ಹೊಟ್ಟೆಯ ಮೇಲೆ ನಾಲ್ಕು ತೂತುಗಳಿರುವ ಒಕ್ಕಳನ್ನು ಕಾಣಬಹುದಾಗಿದೆ. ಇದರ ವಿಶೇಷತೆ ತಿಳಿದು ಬಂದಿಲ್ಲ. ಹಾಗೆಯೇ ಎಡಭಾಗದಲ್ಲಿ ಇತ್ತೀಚೆಗೆ ತಂದಿಟ್ಟಿರುವ ಶ್ರೀರಾಮನ ಪಾದುಕೆಗಳ ಶಿಲಾಪಟ್ಟಿಕೆಯನ್ನು ಸಹ ಕಾಣಬಹುದಾಗಿದೆ. ಹಾಗೆಯೇ ನವರಂಗದ ದ್ವಾರದ ಪಾರ್ಶ್ವಗಳಲ್ಲಿ ಶೈವ ದ್ವಾರಪಾಲಕರಾದ ಮಹಾಕಾಳರ ಉಬ್ಬುಶಿಲ್ಪಗಳಿದ್ದು ಇದು ವಿಜಯನಗರದ ನಾಯಕರ

ಕಾಲದ ರಚನೆಯಾಗಿದೆ, ನಂತರದಲ್ಲಿ ಎಂಟು ಚಿತ್ರಖಂಡ, ಮುಚ್ಚಿದ ಮುಖಮಂಟಪ ಹಾಗೂ 6 ಚಿತ್ರಖಂಡ ಸ್ತಂಭಗಳ ತೆರೆದ ಮುಖಮಂಟಪವಿದೆ.

**ಅಧಿಷ್ಠಾನ:** ಈ ದೇವಾಲಯ ಬಹುಶಃ ಜಗತಿಯನ್ನು ಹೊಂದಿದ್ದು, ನಂತರದ ಕಾಲದಲ್ಲಿ ಮುಚ್ಚಿಹೋಗಿದೆ. ನಂತರ ಅಧಿಷ್ಠಾನವು ಗರ್ಭಗೃಹ, ಸುಖನಾಸಿಗಳಲ್ಲಿ ಒಂದೇ ಮಾದರಿಯಿದ್ದರೆ ನವರಂಗ ನಂತರ ಸೇರ್ಪಡೆಯಾದ ಭಾಗದ ಅಧಿಷ್ಠಾನ ಮತ್ತು ಭಿತ್ತಿಯ ಲಕ್ಷಣವು ಸರಳ ಮಾದರಿಯಾಗಿದೆ. ಮೊದಲ ಭಾಗದಲ್ಲಿ ಪ್ರತಿಬಂಧ ಅಧಿಷ್ಠಾನವಾಗಿದ್ದು, ಉಪಾನ, ಜಗತಿ, ಚೌಕಾಕಾರದ ಕುಮುದ, ಗಳ, ಪ್ರತಿ ಹಾಗೂ ದಂತಪಂಕ್ತಿಯ ಮಹಾಪಟ್ಟಿಯನ್ನು ಕಾಣಬಹುದಾಗಿದೆ. ನಂತರದ ನವರಂಗದ ಅಧಿಷ್ಠಾನ ಸಹ ಪ್ರತಿಬಂಧವಾದವರೂ ಉಪಾನ ಜಗತಿಯ ಭಾಗ ಮುಚ್ಚಿದ್ದು ಚೌಕಾಕಾರದ ಕುಮುದ ಗಳ ಸರಳವಾದ ದಂತಪಂಕ್ತಿಯ ಪಟ್ಟಿಯಿದೆ. ಮುಖಮಂಟಪದ ಅಧಿಷ್ಠಾನವು ಮಂಚಬಂಧ ಮಾದರಿಯಾಗಿದೆ. ಗರ್ಭಗೃಹ, ಸುಖನಾಸಿ, ಭಿತ್ತಿಯು ನಕ್ಷತ್ರಾಕಾರದ ಮಾದರಿಯ ಹಿಂಚಾಚು ಮತ್ತು ಮುಂಚಾಚು ಮಾದರಿಯಲ್ಲಿ ಸರಳ ಬ್ರಹ್ಮಕಾಂತ ಸ್ತಂಭಗಳೊಂದಿಗೆ ರಚನೆಯಾಗಿದೆ. ಗರ್ಭಗುಡಿಯ ಎಡ ಮತ್ತು ಬಲಭಾಗದಲ್ಲಿ ಪ್ರಕಟಿತ ಶಾಸನಗಳಿವೆ. ಹಾಗೆಯೇ ಪ್ರಸ್ತರದಲ್ಲಿ ಉತ್ತರ, ವಲಭಿ, ಸರಳ ದಂತಪಂಕ್ತಿಯ ಕಪೋತ, ವಾಜನ ಹಾಗೂ ದಂತಪಂಕ್ತಿಯ ಹಾರದ ರಚನೆಯಿದೆ. ಪ್ರಾಸಾದ ಭಾಗವು ಮೂರು ತಲಗಳಿಂದ ಕೂಡಿದ್ದು ದ್ರಾವಿಡ ಮಾದರಿಯ ರುದ್ರಚ್ಛಂದ ಶಿಖರ ಮಾದರಿಯಲ್ಲಿ ರಚನೆಯಾಗಿದೆ. ಇದರಲ್ಲಿ ನಾಸಿ, ಕರ್ಣಕೂಟ ಭದ್ರಗಳನ್ನು ಹೊಂದಿದೆ. ಆದರೆ ನಾಸಿ ಭದ್ರಗಳಲ್ಲಿ ಯಾವುದೇ ಉಬ್ಬುಶಿಲ್ಪ ರಚನೆಯಿಲ್ಲದೇ ಸರಳವಾಗಿದೆ. ಕೆಳಗಿನ ತಲದ ಭದ್ರಗಳ ಮೇಲೆ ಸಾಮಾನ್ಯವಾಗಿ ಅಲಂಕಾರಿಕ ಕಲ್ಲಿನ ಕಳಶಗಳನ್ನು ಜೋಡಿಸಲಾಗಿದೆ. ನಂತರ ವೇದಿಕೆಯ ಮೇಲೆ ಬೋರಲು ಹಾಕಿದ ಕಮಲದ ರೀತಿಯ ಪುಷ್ಪದ ಶಿಲೆಯನ್ನು ಜೋಡಿಸಿ ಅದರ ಮೇಲೆ ಹೊಸದಾದ ಕಲ್ಲಿನ ಸ್ಥೂಫಿಯನ್ನು ಪ್ರತಿಷ್ಠಾಪಿಸಲಾಗಿದೆ.

ಈ ಶಿಖರದ ಮುಂದಿನ ಸುಖನಾಸದ ಲಲಾಟದಲ್ಲಿ ಸುಂದರವಾದ ನಾಟ್ಯಶಿವ ಜೊತೆಯಲ್ಲಿ ಡೋಲುಗಾರರು ಮತ್ತು ಮದ್ದಾಳೆಗಳನ್ನು ನುಡಿಸುವವರು ಹಾಗೂ ಸುಂದರವಾದ ಕೀರ್ತಿಮುಖ ಅಲಂಕರಣೆಯಿದೆ. ಅಲ್ಲದೇ ಸುಖನಾಸದ ಮೇಲೆ ಹೊಯ್ಸಳರ ಲಾಂಛನವಾದ ಸಳನು ಹುಲಿಯೊಂದಿಗೆ ಹೋರಾಡುತ್ತಿರುವ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಒಟ್ಟಾರೆ ಸುಂದರವಾದ ನಕ್ಷತ್ರಾಕಾರದ ಜಗತಿ, ಅಧಿಷ್ಠಾನ, ಭಿತ್ತಿ, ಪ್ರಸ್ತರ, ಪ್ರಾಸಾದ ಮತ್ತು ಶಿಖರ ಭಾಗಗಳು ಇಂದೂ ಗಿಡ ಮತ್ತು ಹುಲ್ಲಿನ ಪೊದೆಗಳಿಂದ ಬಿರುಕು ಬಿಡುತ್ತಿರುವುದು ಹಾಗೂ ಪ್ರಾಕೃತಿಕವಾಗಿ ಶಿಲ್ಪಗಳು ಸವೆಯುತ್ತಿರುವುದನ್ನು ಕಾಣಬಹುದಾಗಿದೆ. ಅಲ್ಲದೇ ನವರಂಗ, ಮುಖಮಂಟಪ, ಮೇಲ್ಛಾವಣಿಯ ಗಚ್ಚುಗಾರೆಯು ಹಾಳಾಗಿ ನೀರು ನಿಂತಿರುವುದು ದೇವಾಲಯವು ಅವಸಾನದ ಅಂಚಿನತ್ತ ಸಾಗುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ದೇವಾಲಯದ ಪ್ರಾಕಾರದಲ್ಲಿ ನಂತರದ ಕಾಲದಲ್ಲಿ ಸೇರ್ಪಡೆಯಾದಂತಹ ಗುಡಿಗಳಿದ್ದು ನೈರುತ್ಯದಲ್ಲಿ ಹೊಸದಾದ ಶಿಲ್ಪವಾದ ಚತುರ್ಭುಜಧಾರಿಯಾದಂತಹ ದಕ್ಷಿಣಮೂರ್ತಿ, ವಾಯುವ್ಯದಲ್ಲಿ ಹೊಸ ಮೂರ್ತಿಶಿಲ್ಪವಾದ ಚಂಡಿಕೇಶ್ವರ, ಇದರ ಪಕ್ಕದಲ್ಲಿ ಪ್ರನಾಳ ಸೇರಿಕೊಂಡ ವಸಂತಕೊಳ ಹಾಗೂ ನವರಂಗದ ಹೊರಭಿತ್ತಿಯ ಈಶಾನ್ಯದಲ್ಲಿ ಈಶಾನ್ಯೇಶ್ವರ ಎನ್ನುವ ಶಿವಲಿಂಗದ ಗುಡಿಗಳನ್ನು ಕಾಣಬಹುದಾಗಿದೆ.

ಸುತ್ತಲಿನ ಪ್ರಾಕಾರದಲ್ಲಿ 35 ಲಿಂಗ ಮತ್ತು ನಂದಿಗಳ ಗುಡಿಗಳಿದ್ದು ಬಹಳಷ್ಟು ಗುಡಿಗಳ ನಿರ್ಮಾಣಕಾರರ ಹೆಸರು ಲಿಂಗಗಳ ನಾಮದ ಶಾಸನಗಳಿದ್ದು ಇವೆಲ್ಲವು ಮೈಸೂರು ಒಡೆಯರ್ ಅವರ ಮಂತ್ರಿಗಳು, ಭಕ್ತರಿಂದ ನಿರ್ಮಿಸಿದವುಗಳಾಗಿವೆ. ಅಲ್ಲದೇ ವಾಯುವ್ಯ ಪ್ರಾಕಾರದ ಮೇಲೆ ಇಂದ್ರಾಕ್ಷಿ ಮತ್ತು ವಿಶಾಲಾಕ್ಷಿ ಅಮ್ಮನವರ ಗುಡಿಗಳು, ಇಂದ್ರಾಕ್ಷಿ ಗುಡಿಯ ಮುಂದೆ ಶಂಕರಾಚಾರ್ಯರಿಂದ ರಚಿಸಲ್ಪಟ್ಟ ಶ್ರೀ ಚಕ್ರಬಿಂದುವಿದ್ದು, ಇದರ ಮಧ್ಯದ ಬಿಂದು ಹಳೆಯದಾಗಿದ್ದು ಇದರ ಸುತ್ತಲಿನ ಸರ್ವತೋಭದ್ರ ಮಂಡಲ ಹೊಸದಾಗಿ ರಚಿಸಲಾಗಿದೆ. ಆದ್ದರಿಂದ ಇಲ್ಲಿ ದೇವಿಯ ಉಪಾಸನೆಯು ಸಹ ನಡೆಯುತ್ತಿತ್ತು ಎಂದು ಹೇಳಬಹುದು. ಅಲ್ಲದೇ ಬಹಳ ಮುಖ್ಯವಾಗಿ ಪ್ರಾಕಾರದ ನೈರುತ್ಯದ ಮೂಲೆ ಗುಡಿಯಲ್ಲಿ ಹಲವಾರು ಶಿಲ್ಪಗಳನ್ನು ತಂದು ಹಾಕಲಾಗಿದೆ.

ಕ್ರಮವಾಗಿ 2 ½ ಅಡಿ ನಾಗರಕಲ್ಲು, 2 ಅಡಿ ಎತ್ತರದ ಉಬ್ಬುಶಿಲ್ಪವಿರುವ ಆಂಜನೇಯ, ಇತ್ತೀಚೆಗೆ ಕೆತ್ತಿಸಿರುವ ಗಣಪತಿ ಮತ್ತು ನಂದಿಯಿದ್ದು ಅದಲ್ಲದೇ ಪ್ರಾಚೀನವಾದ 2 ಅಡಿ ಎತ್ತರದ ಚತುರ್ಭುಜಧಾರಿಯಾದಂತಹ ವಿಷ್ಣುವಿದ್ದು ಎಡಹಿಂಗೈಯಲ್ಲಿ ಶಂಖ, ಎಡ ಮುಂಗೈಯಲ್ಲಿ ಗಧಾ, ಬಲಹಿಂಗೈಯಲ್ಲಿ ಪ್ರಯೋಗ ಚಕ್ರ ಹಾಗೂ ಬಲ ಮುಂಗೈಯಲ್ಲಿ ಸೃಷ್ಟಿ ಫಲವನ್ನು ಹಿಡಿದಿರುವ ಕೇಶವ ಮೂರ್ತಿಯಿದೆ. ನಂತರ ಬಹಳ ಮುಖ್ಯವಾಗಿ 3 ½ ಅಡಿ ಎತ್ತರದ ವೇಣುಗೋಪಾಲ ಮೂರ್ತಿಯಿದ್ದು ಹಾಗೂ ಬಲಭಾಗದಲ್ಲಿ 2 ಅಡಿ ಎತ್ತರದ ರುಕ್ಮಿಣಿ ಮತ್ತು ಎಡಭಾಗದಲ್ಲಿ ಸತ್ಯಭಾಮೆಯರ ಸುಂದರವಾದ ಹೊಯ್ಸಳರ ಕಾಲದ ಶಿಲ್ಪಗಳಿವೆ. ಪ್ರಮುಖವಾಗಿ ಶಾಸನದ ಉಲ್ಲೇಖದ ಪ್ರಕಾರ ವಿಜಯನಗರ ಕಾಲದಲ್ಲಿ ರಾಮನಾಥ ದೇವರಿಗೆ ದತ್ತಿ ನೀಡುವುದರ ಜೊತೆಗೆ ಗೋಪಾಲ ದೇವರಿಗೆ ದಾನದತ್ತಿ ನೀಡುವುದರ ಬಗ್ಗೆ ಉಲ್ಲೇಖವಿದೆ. ಬಹುಶಃ ಪ್ರಾಚೀನವಾದ ಪ್ರತ್ಯೇಕ ಗೋಪಾಲಕೃಷ್ಣ ಗುಡಿಯಿದ್ದು ಅದು ನಶಿಸಿ ಹೋದ ಮೇಲೆ ಇಲ್ಲಿಗೆ ತಂದಿಟ್ಟಿರಬಹುದಾಗಿದೆ. ಹಾಗೆಯೇ ಪ್ರತ್ಯೇಕ ಗೋಪಾಲ ಗುಡಿಯಿತ್ತು ಎಂಬುದಕ್ಕೆ ಪೂರಕವಾಗಿ 1½ ಅಡಿ ನಮ್ಮಾಳ್ವಾರ್‌ರವರ ಮೂರ್ತಿಯನ್ನು ಸಹ ಕಾಣಬಹುದಾಗಿದೆ. ಅಲ್ಲದೇ ಹೊಯ್ಸಳರ ಲಕ್ಷಣವಿರುವ ಸುಂದರವಾದ 3 ಅಡಿ ಎತ್ತರದ ಭೈರವ ಮೂರ್ತಿಯಿದ್ದು ಇದು ಚುತುರ್ಭುಜಧಾರಿಯಾಗಿ ಕತ್ತಿನಲ್ಲಿ ರುಂಡಮಾಲೆ, ಕೈಗಳಲ್ಲಿ ಕಪಾಲ, ಕತ್ತಿ ಹಾಗೂ ಕೆಳಗೆ ನಾಯಿಯು ರಕ್ತವನ್ನು ನೆಕ್ಕುತ್ತಿರುವ ಪಿಶಾಚಿಗಳ ಕೆತ್ತನೆಯಿದೆ, ಹಾಗೂ 2 ಅಡಿಯ ಅಷ್ಟಭುಜಧಾರಿಯಾದ ಮಹಿಷಮರ್ಧಿನಿಯ ಶಿಲ್ಪವಿದೆ ಹಾಗೂ 2 ½ ಅಡಿ ಎತ್ತರದ ಸೂರ್ಯಶಿಲ್ಪವಿದ್ದು ಇದರ ಪ್ರಭಾವಳಿಯಲ್ಲಿ ದಶಾವತಾರದ ಶಿಲ್ಪದ ಕೆತ್ತನೆಯಿದೆ. ಇಲ್ಲಿನ ವಿಷ್ಣು, ಭೈರವ, ಮಹಿಷಮರ್ಧಿನಿ, ಸೂರ್ಯ ಶಿಲ್ಪಗಳ ಮೂಲ ರಾಮನಾಥ ಗುಡಿಯಲ್ಲಿದ್ದಂತಹ ಶಿಲ್ಪಗಳಾಗಿರಬಹುದು ನಂತರದ ಕಾಲದಲ್ಲಿ ಗಣೇಶನನ್ನು ಬಿಟ್ಟು ಉಳಿದ ಶೈವ ಪರಿವಾರ ದೇವತಾ ಶಿಲ್ಪಗಳನ್ನು ಹೊರಹಾಕಿದ್ದು ಇವುಗಳನ್ನು ಇಂದು ಪ್ರಾಕಾರದ ಗುಡಿಯಲ್ಲಿ ಇಡಲಾಗಿದೆ. ಆದ್ದರಿಂದ ರಾಮನಾಥಪುರ ಒಂದು ಶೈವ, ವೈಷ್ಣವ ಆರಾಧನೆ ಹಾಗೂ ಸೂರ್ಯ ಶಕ್ತಿದೇವತೆಗಳ ಉಪಾಸನೆ, ಜೊತೆಗೆ ಭೈರವ ಉಪಾಸನೆಯನ್ನು ನಡೆಸುತ್ತಿದ್ದ ಬಹುಮುಖ್ಯ ಕೇಂದ್ರವೆಂದು ಹೇಳಬಹುದಾಗಿದೆ.

ಅಲ್ಲದೇ ಬಹು ಮುಖ್ಯವಾಗಿ ಮೈಸೂರು ಒಡೆಯರ ಕಾಲದಲ್ಲಿ ರಚನೆಯಾದ ಈ ಪ್ರಾಕಾರವು ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ. ಅದರಲ್ಲಿ ಪ್ರಾಕಾರದ ಮೇಲಿನ ಹಾರ (ದಿಂಡುಗೋಡೆ), ಇದು ಸುಂದರ ಮತ್ತು ಆಕರ್ಷಕ ಸೂಕ್ಷ್ಮ ಕೆತ್ತನೆಯಲ್ಲಿ ರಚಿಸಲಾಗಿದೆ. ಇದರಲ್ಲಿ ಸುಮಾರು ಆರು ರೀತಿಯ ಪಟ್ಟಿಕೆಗಳಿದ್ದು ಕೆಳಗಿನಿಂದ ಹಂಸ ಮತ್ತು ಪಾರಿವಾಳ, ತೆನೆ, ವಜ್ರ, ಹೂ ಹಾಗೂ ಸ್ತ್ರೀ ಪುರುಷರನ್ನು ಒಳಗೊಂಡ ಭದ್ರ, ನಾಸಿ, ಕೋಷ್ಠಕಗಳನ್ನು ಸಹ ಕಾಣಬಹುದಾಗಿದೆ. ಇಷ್ಟು ಸುಂದರವಾದ ಶಿಲ್ಪಗಳನ್ನು ಮಾಡಲು ಬಹುಮುಖ್ಯ ಕಾರಣವೆಂದರೆ ಬಳಸಿರುವ ಕಚ್ಚಾವಸ್ತುವೇ ಆಗಿದೆ. ಅಂದರೆ ಶುದ್ಧವಾದ ಸುಣ್ಣದ ಗಾರೆಯನ್ನು ಬಳಸಿದ್ದು ಇದರಲ್ಲಿ

ಯವುದೇ ಗಚ್ಚುಗಾರೆ, ಸಿಮೆಂಟ್, ಇಟ್ಟಿಗೆ ಸೇರಿಸಿರುವುದಿಲ್ಲ. ಈ ರೀತಿ ಅಲಂಕರಣ ಮೇಲುಕೋಟೆ, ನಂಜನಗೂಡು, ಶ್ರೀರಂಗಪಟ್ಟಣ ಮುಂತಾದ ಕಡೆಗಳಲ್ಲಿ ಕಾಣಬಹುದಾಗಿದೆ.

ಈ ದೇವಾಲಯದ ಹಿಂಬದಿಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹರಿಯುವ ಕಾವೇರಿ ನದಿಯಿದೆ. ಈ ನದಿಯಲ್ಲಿ ಸೇರಿಕೊಂಡಂತೆ ಪುರಾಣ ಪ್ರಸಿದ್ಧ ವಹ್ನಿ ಪುಷ್ಕರಣಿಯನ್ನು ಕಾಣಬಹುದಾಗಿದೆ. ಈ ಪುಷ್ಕರಣಿಯಲ್ಲಿ ವೈವಿಧ್ಯತೆಯಿಂದ ಕೂಡಿದ ಮೀನುಗಳು ಕಾಣಬರುತ್ತವೆ. ಅಲ್ಲದೇ ಐತಿಹಾಸಿಕವಾಗಿ ತಮಿಳುನಾಡಿನಿಂದ ಬಂದಂತಹ ರಾಮಾನುಜಾಚಾರ್ಯರು ವಹ್ನಿ ಪುಷ್ಕರಣಿಗೆ ಭೇಟಿ ನೀಡಿದ್ದರು ಎನ್ನಲಾಗಿದೆ. ಈ ಪ್ರಸಿದ್ಧ ಪುರಾಣ ವಹ್ನಿ ಪುಷ್ಕರಣಿ ಈ ಸ್ಥಳವೇ ಆಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂಬುದಾಗಿ ಈ ಭೇಟಿಯ ಅಂಶದ ಬಗ್ಗೆ ಡಾ.ಶಲ್ವಪಿಳ್ಳೈ ಅಯ್ಯಂಗಾರ್‌ರವರ ಆಚಾರ್ಯ ಶ್ರೀ ರಾಮಾನುಜಾಚಾರ್ಯ ಎಂಬ ಪುಸ್ತಕದಲ್ಲಿ ವಹ್ನಿ ಪುಷ್ಕರಣಿಗೆ ಭೇಟಿ ನೀಡಿದ್ದರು ಎಂದಿದೆ. ಹಾಗೆಯೇ ವಹ್ನಿ ಪುಷ್ಕರಣಿ ಮೆಟ್ಟಿಲುಗಳಿಗೆ ಹೊಂದಿಕೊಂಡಂತೆ ಹಾಗೂ ಕಾವೇರಿ ನದಿಯಿಂದ ದೇವಾಲಯ ರಕ್ಷಿಸಲು ದೊಡ್ಡ ಕಲ್ಲಿನ ತಡೆಗೋಡೆ ನಿರ್ಮಿಸಲಾಗಿದೆ. ಈ ಗೋಡೆಗೆ ಹೊಂದಿಕೊಂಡಂತೆ ಇರುವ ನಾಲ್ಕು ಖಂಡಸ್ತಂಭಗಳಿಂದ ಕೂಡಿದ ಅರ್ಧನಾರೀಶ್ವರ ಗುಡಿಯಿದೆ. ಸಾಮಾನ್ಯವಾಗಿ ಅರ್ಧನಾರೀಶ್ವರ ಶಿವನನ್ನು ಮಾನವಾಕೃತಿಯಲ್ಲಿ ಕಾಣಬಹುದು. ಆದರೆ ಇಲ್ಲಿ ಒಂದು ಪ್ರಾಚೀನ ಪಾಣೀಪೀಠವಿದ್ದು ಇದರ ಮೇಲೆ ಲಿಂಗದ ರೀತಿಯಿರುವ ಕಲ್ಲಿನ ಮಧ್ಯದಲ್ಲಿ ಅಡ್ಡಲಾಗಿ ಕತ್ತರಿಸಲಾಗಿದೆ. ಬಹುಶಃ ಮೊದಲು ಪೀಠ ಪಾರ್ವತಿ ಮತ್ತು ಲಿಂಗ ಪುರುಷ ಶಿವನಾಗಿದ್ದುದರ ಸಂಕೇತವಾಗಿ ಪೀಠ ಲಿಂಗವಿದ್ದಿತು, ತದನಂತರ ಕಲಿಯುಗದಲ್ಲಿ ಸಮಾನತೆಯ ಆಧಾರದ ಮೇಲೆ ಮಿಥುನ ಸೃಷ್ಟಿಯನ್ನು ತೋರಿಸಲು ಈ ರಚನೆಯಾಗಿದ್ದು ಇದನ್ನು ಶಿವನ ಭಾಗ ಎತ್ತರ ಮತ್ತು ಪಾರ್ವತಿ ಭಾಗ ಚಿಕ್ಕದಾಗಿ ತೋರಿಸಲಾಗಿದೆ.

ಈ ರೀತಿಯ ವಿಭಿನ್ನವಾದ ಅಂಶಗಳನ್ನು ಹೊಂದಿರುವ ಈ ದೇವಾಲಯ ಇಂದು ದುಃಸ್ಥಿತಿಯಲ್ಲಿರುವುದನ್ನು ಕಾಣಬಹುದಾಗಿದೆ. ಈ ದೇವಾಲಯವು ಆಧುನಿಕ ಮಾನವನಿಂದ ಹಾಗೂ ಪ್ರಕೃತಿಯಿಂದ ನಶಿಸಿಹೋಗುತ್ತಿರುವುದನ್ನು ಕಾಣಬಹುದಾಗಿದೆ. ಈ ದೇವಾಲಯದ ನಿರ್ಮಾಣ 900 ವರ್ಷ ಹಿಂದಿನದ್ದಾಗಿದ್ದು ಕಾಲಘಟ್ಟದ ಕಾವೇರಿ ನದಿಯ ಹರಿವನ್ನು ಗಮನಿಸಿಯೇ ಆಯಾಕಟ್ಟಿನ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಆದರೆ ಕಾಲಾಂತರಗಳಲ್ಲಿ ನದಿಯ ನೀರಿನ ಹರಿಯುವ ಮಟ್ಟ ಹೆಚ್ಚಾಗಿ ದೇವಾಲಯ ಮುಳುಗಡೆಯಾಗುವ ಹಂತದಲ್ಲಿದ್ದು ಸುತ್ತಲೂ ಕಲ್ಲಿನಿಂದ ತಡೆಗೋಡೆ, ಪ್ರಾಕಾರಗಳನ್ನು ನಿರ್ಮಿಸಲಾಗಿದೆ. ಇಂದಿಗೂ ಸಹ 2018 ಮತ್ತು 2019ನೇ ಸಾಲಿನ ಮಳೆಯಿಂದಾಗಿ ನದಿಯ ಪ್ರವಾಹ ಹೆಚ್ಚಾಗಿ ಪ್ರಾಕಾರದ ಗೋಡೆಯ ಮಟ್ಟಕ್ಕೆ ನೀರು ಬಂದಿದ್ದು ಆ ಸಮಯದಲ್ಲಿ ಪ್ರಾಕಾರದ ಒಳಗಿನ ಪರಿವಾರ ದೇವಾಲಯಗಳ ಗುಡಿ ಮುಚ್ಚಿ ಹೋಗಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಹಿಂದೆಯೇ ನದಿಯ ಪ್ರಭಾವದಿಂದ ಸುತ್ತಲೂ ಪ್ರಾಕಾರ ಗೋಡೆ ಹಾಕಿರಬೇಕು. ಆಗ ದೇವಾಲಯದ ಜಗತಿ ಮುಚಿರಬಹುದಾಗಿದೆ. ಅಲ್ಲದೇ ದೇವಾಲಯದ ಮಹಿಮೆಯನ್ನು ಅರಿಯದ ಸ್ಥಳೀಯರು ರಾಮನಾಥನ ಪರಿವಾರ ದೇವತೆಗಳ ವಿಗ್ರಹಗಳನ್ನು ಎಲ್ಲಿ ಬೇಕೋ ಅಲ್ಲಿ ಪ್ರತಿಷ್ಠಾಪಿಸಿರುವುದು ಸಹ ಧಾರ್ಮಿಕ ವಿಧಿವಿಧಾನಗಳ ಪಾಲನೆ ಇವರಿಗೆ ಇಲ್ಲವೆನ್ನಬಹುದಾಗಿದೆ. ಅಲ್ಲದೇ ಶಾಸ್ತ್ರಬದ್ಧವಲ್ಲದ ಪ್ಲಾಸ್ಟಿಕ್ ವಸ್ತುಗಳು, ಗ್ರಾನೈಟ್ ಕಲ್ಲುಗಳು, ಅಲಂಕಾರಿಕ ಬಣ್ಣ ಮತ್ತು ಸುಣ್ಣಗಳ ಬಳಕೆಯಿಂದ ಶಾಸನಗಳು, ಶಿಲ್ಪಗಳು ನಾಶವಾಗುತ್ತಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಈ ನಮ್ಮ ಸಂಸ್ಕೃತಿಯ ಪ್ರತೀಕವಾದ ದೇವಾಲಯಗಳ ನಶಿಸುವಿಕೆಯನ್ನು ಸಂರಕ್ಷಿಸುವುದು ಮತ್ತು ಅದರ ಮಹತ್ವವಾಗಿ ಮುಂದಿನ ಪೀಳಗೆಗೆ ತಿಳಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

**ಆಕರಗ್ರಂಥಗಳು**:


1. ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-ಎಂಟು, ಮೈಸೂರು ವಿಶ್ವವಿದ್ಯಾನಿಲಯ, 1984.
2. ಡಾ.ಬಾ.ರಾ.ಗೋಪಾಲ್-ಹಾಸನ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, 2010
3. ಡಾ.ಜಿ.ಮನೋಜ್-ದೇವಾಲಯ ವಾಸ್ತುವಿಜ್ಞಾನ, ಸುಬೋಧಿನಿ ಬುಕ್ ಪಬ್ಲಿಷರ್ಸ್ ಅಂಡ್ ನಾಲೆಡ್ಜ್ ಅಕಾಡೆಮಿ, 2015
4. ಇತಿಹಾಸ ಮತು ಪುರಾತತ್ವ, ಮೈಸೂರು ವಿಶ್ವವಿದ್ಯಾನಿಲಯ, 2009.
5. ಆರ್. ಎಸ್. ಪ್ರದೀಪ ಬನ್ನಿಂತಾಯ., ರಾಮನಾಥಪುರ ಕ್ಷೇತ್ರ ವೈಭವ, ಶ್ರೀಧರ ಪಬ್ಲಿಕೇಷನ್,2010.
6. Gopinath Rao, T.V., Elements of Hindu Iconography, Delhi (Reprint), 1977, I, II & III,
7. ಡಾ.ಶಲ್ವಪಿಳ್ಳೈ ಅಯ್ಯಂಗಾರ್., ಆಚಾರ್ಯ ಶ್ರೀ ರಾಮಾನುಜಾಚಾರ್ಯ, 2018
8. ಕ್ಷೇತ್ರಕಾರ್ಯ ವರದಿ.